**ದಿನಾಂಕಃ 30.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀ.MBL ರವರಿಂದಃ**

1) ಯಾವ ಅಪಘಾತವು ಈ ಪ್ರಕರಣದ ವಸ್ತು ವಿಷಯ ಆಗಿದೆಯೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ ಮತ್ತು ಸದರಿ ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ವಿಮಾ ಸಂಸ್ಥೆಯು ಖಾಸಗಿ ವ್ಯಕ್ತಿಗಳಿಂದ ಯಾವುದೇ ಪ್ರತ್ಯೇಕವಾದ ತನಿಖೆಯನ್ನು ಮಾಡಿಸಿರುವುದಿಲ್ಲ, ಆದರೆ ಪೋಲಿಸ್ ದಾಖಲೆಗಳನ್ನು ಮಾತ್ರ ಪಡೆದುಕೊಂಡಿದ್ದೇವೆ.

2) ಸದರಿ ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ಪೋಲಿಸರು ಕಲೆ ಹಾಕಿರುವ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿದೆ. **AP-26-BH-5995** ಸಂಖ್ಯೆಯ ಕಾರಿಗೆ ನಮ್ಮ ಸಂಸ್ಥೆಯಿಂದ ವಿಮಾ ಪಾಲಿಸಿಯನ್ನು ನೀಡಲಾಗಿತ್ತು ಮತ್ತು ಆ ಪಾಲಿಸಿಯು ದಿಃ**30.03.2024** ರಂದು ಚಾಲ್ತಿಯಲ್ಲಿ ಇತ್ತು. ಸದರಿ ಕಾರಿನ ಮಾಲೀಕನ ಅಥವಾ ಚಾಲಕನ ಯಾವುದೇ ಹೇಳಿಕೆಯನ್ನು ನಮ್ಮ ಸಂಸ್ಥೆಯಿಂದ ನಾವು ಪಡೆದುಕೊಂಡಿರುವುದಿಲ್ಲ, ಆದರೆ ಅವರುಗಳಿಗೆ ನಮ್ಮ ಸಂಸ್ಥೆಯಿಂದ ನೋಟೀಸು ಕೊಡಲಾಗಿತ್ತು. ಅಪಘಾತವು ಆದ ಮಾರನೇ ದಿನವೇ ಮೇಲೆ ಹೇಳಿದ **AP-26-BH-5995** ಸಂಖ್ಯೆಯ ಕಾರಿನ ಚಾಲಕನ ವಿರುದ್ಧ ಪೋಲಿಸರಿಗೆ ದೂರನ್ನು ಕೊಡಲಾಗಿದೆ ಎಂದರೆ ಸರಿ.

3) ಸದರಿ ಅಪಘಾತದ ಸಂಬಂಧವಾಗಿ ಪೋಲಿಸರು ತನಿಖೆಯನ್ನು ಮಾಡಿದ್ದಾರೆ ಮತ್ತು ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಮತ್ತು ಅಪಘಾತವು ಸದರಿ **AP-26-BH-5995** ಸಂಖ್ಯೆಯ ಕಾರಿನ ಚಾಲಕನ ತಪ್ಪಿನಿಂದಲೇ ಸಂಭವಿಸಿದೆ ಎಂದು ಹೇಳಿದ್ದಾರೆ ಎಂದರೆ ಅದು ಸುಳ್ಳು ಅಂತಿಮ ವರದಿ ಆಗಿದೆ.

4) ನಾವು ನಮ್ಮ ಸಂಸ್ಥೆಯಿಂದ ಐಎಂವಿ ವರದಿಯನ್ನು ಪಡೆದುಕೊಳ್ಳಲು ಪ್ರಾರ್ಥನೆ ಮಾಡಿದ್ದೆವು, ಆದರೆ ಪೋಲಿಸರು ಆ ಐಎಂವಿ ವರದಿಯನ್ನು ನೀಡಿರುವುದಿಲ್ಲ ಎನ್ನುವ ಸಂಬಂಧವಾಗಿ ನಮ್ಮ ಸಂಸ್ಥೆಯಿಂದ ಪೋಲಿಸ್ ಇಲಾಖೆಯ ಮೇಲಧಿಕಾರಿಗಳಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ.

5) **AP-26-BH-5995** ಸಂಖ್ಯೆಯ ಕಾರು ಅಪಘಾತವನ್ನು ಮಾಡಿದೆ ಮತ್ತು ಕೇವಲ ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

6) ಮೇಲೆ ಹೇಳಿದ ಅಪಘಾತದ ಸಂಬಂಧವಾಗಿ ಪೋಲಿಸರು ಮಾಡಿದ್ದ ಕ್ರಿಮಿನಲ್ ಪ್ರಕರಣದಲ್ಲಿ ಮೇಲೆ ಹೇಳಿದ **AP-26-BH-5995** ಸಂಖ್ಯೆಯ ಕಾರಿನ ಚಾಲಕನು ಹಾಜರು ಆಗಿದ್ದಾನೆ ಮತ್ತು ತನ್ನ ತಪ್ಪನ್ನು

ಒಪ್ಪಿಕೊಂಡಿದ್ದಾನೆ ಮತ್ತು ನಂತರ ನ್ಯಾಯಾಲಯವು ಆತನಿಗೆ ಶಿಕ್ಷೆಯನ್ನು ವಿಧಿಸಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.